ಹಾವಳಿ, ಮಧುಮೇಹ ಮುಂತಾದವುಗಳಿಂದ ಹೃದಯ ರೋಗಿಗಳೂ ಹೆಚ್ಚುತ್ತಿದ್ದಾರೆ. ಆದರೂ ಇಂದು ವೈದ್ಯಕೀಯ ವಿಜ್ಞಾನ ಸಾಕಷ್ಟು ಅತ್ಯಾಧುನಿಕವಾಗಿದ್ದರಿಂದ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ಉತ್ತಮ ವೈದ್ಯಕೀಯ ಸೌಲಭ್ಯಗಳೂ ಇವೆ. ಆದರೆ ಇದನ್ನು ತಜ್ಞ ವೈದ್ಯರೇ ಮಾಡಬೇಕು' ಎನ್ನುತ್ತಾರೆ ಫೋರ್ಟಿಸ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ. ವಿವೇಕ್ ಜವಳಿ.



## ಹೃದಯ ವೈಫಲ್ಯ ಲಕ್ಷಣಗಳೇನು?

ಉಸಿರಾಟಕ್ಕೆ ತೊಂದರೆ, ಮಧ್ಯರಾತ್ರಿ ಎಚ್ಚರವಾಗುವುದು, ನಡೆದಾಡಲು ತೊಂದರೆ, ಮೆಟ್ಟಿಲು ಹತ್ತಲು ಆಗದಂಥ ಪರಿಸ್ಥಿತಿ. ಆಯಾಸವಾಗುವುದು, ಕಾಲುಗಳಲ್ಲಿ ಸೆಳೆತ, ನಿತ್ರಾಣ ಮತ್ತು ವಿಪರೀತ ನಿಶ್ಶಕ್ತಿ ಇವು ಹೃದಯ ವೈಫಲ್ಯದ ಲಕ್ಷಣಗಳು.

'ಈ ಸಮಸ್ಯೆ ಬಂದ ಕೂಡಲೇ ತಜ್ಞ ವೈದರಿಂದ ತಪಾಸಣೆ ಮಾಡಿಸಿಕೊಳ್ಳಬೇಕು. ಇಸಿಜಿ, 2ಡಿ ಇಕೊಕಾರ್ಡಿಯಾಲಜಿ, ಹೃದಯ ಸ್ಕ್ಯಾನಿಂಗ್ ಇಮೇಜ್ ತೆಗೆಯುವ ಮೂಲಕ, ರಕ್ತಪರೀಕ್ಷೆ.. ಮುಂತಾದ ಸಾಧನಗಳ ಮೂಲಕ ಇದನ್ನು ಪತ್ತೆ ಹಚ್ಚಬಹುದು. ಹೃದಯ ವೈಫಲ್ಯ ಅಪಾಯಕಾರಿ. ಶೇ.50ರಷ್ಟು ಮಂದಿ ಹೃದಯ ವೈಫಲ್ಯ ಆದವರು ಹೆಚ್ಚೆಂದರೆ ಮುಂದಿನ ಐದು ವರ್ಷ ಬದುಕಿ ಉಳಿಯಬಹುದು. ರೋಗಿಗಳು ಪದೇ ಪದೇ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಐದಾರು ತರದ ಮಾತ್ರೆ ದಿನನಿತ್ಯ ಸೇವಿಸಬೇಕಾಗುತ್ತದೆ. ಈ ರೀತಿ ಆದ ರೋಗಿಗೆ ಕಿಡ್ನಿ, ಲಿವರ್ ಮತ್ತು ಬಹು ಅಂಗ ವೈಫಲ್ಯ ಆಗುವ ಸಾಧ್ಯತೆಯೂ ಹೆಚ್ಚು' ಎಂದು ಹೇಳುತ್ತಾರೆ ಡಾ.ಯಶೋದಾ.

ತಮ್ಮದೇ ಆಸ್ಪತ್ರೆಗೆ ದಾಖಲಾದ ವೃದ್ಧೆಯೊಬ್ಬರ ಹೃದಯ ಬಡಿತ ಸಮಸ್ಯೆಯನ್ನು ಉದಾಹರಣೆಯಾಗಿ ವಿವರಿಸುವ ಇವರು, '100 ವರ್ಷದ ಸರೋಜಮ್ಮ ಎಂಬ ಅಜ್ಜಿ ಫೋರ್ಟಿಸ್ ಆಸ್ಪತ್ರೆಗೆ ಕೆಲದಿನಗಳ ಹಿಂದೆ ಬಂದಾಗ ಪ್ರಜ್ಞಾಹೀನರಾಗಿದ್ದರು. ಅವರಿಗೆ ಹೃದಯ ಬಡಿತ ಸಮಸ್ಯೆ ಪತ್ತೆ ಹಚ್ಚಲಾಯಿತು. ಮಧುಮೇಹ, ಏರು ರಕ್ತದೊತ್ತಡ, ನ್ಯುಮೋನಿಯ ಹೀಗೆ.. ಬಹು ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದ ಇವರಿಗೆ ಚಿಕಿತ್ಸೆ ನೀಡುವುದು ಒಂದು ಸವಾಲಾಯಿತು. ಇಸಿಜಿ ಮಾಡಿ ನೋಡಿದಾಗ ಹೃದಯ ಬಡಿತ ವಿಪರೀತ ಕ್ಷೀಣಿಸಿದ್ದು ಗೊತ್ತಾಯಿತು. ಇದನ್ನು ಸರಿಪಡಿಸಲು ಶಾಶ್ವತ ಪೇಸ್‌ಮೇಕರ್ ಕಸಿ ಮಾಡಿದೆವು. ಮೂರು ದಿನಗಳಲ್ಲಿ ಆಕೆಯನ್ನು ಡಿಸ್‌ಚಾರ್ಜ್ ಮಾಡಿ ಕಳಿಸಲಾಯಿತು' ಎಂದು ವಿವರಿಸುತ್ತಾರೆ.

ಹೃದಯಕ್ಕೆ ತೊಂದರೆ ಆದ ತಕ್ಷಣ ಆಸ್ಪತ್ರೆಗೆ ಹೋಗಿ ತಜ್ಞರಿಂದ ತಪಾಸಣೆ ಮಾಡಿಸಿಕೊಳ್ಳಬೇಕು, ಕ್ಲಪ್ತ ಕಾಲದಲ್ಲಿ ಸೂಕ್ತ ಚಿಕಿತ್ಸೆ, ಇದಕ್ಕೆ ಕಾರ್ಡಿಯಾಕ್ ರಿಸಿಂಕ್ರೊನೈಸೇಷನ್ ಥೆರಪಿ ಮೂಲಕ ಚಿಕಿತ್ಸೆ ನೀಡಲಾಗುತ್ತದೆ.

ಡಾ.ಯಶೋದಾ ರವಿ ಮೊಬೈಲ್: 9845912815


RELIV PAIN CENTER

"life without pain"

ಬೆಂಗಳೂರಿನ ಪ್ರಪ್ರಥಮ ಸೂಪರ್ ಸ್ಪೆಷಾಲಿಟಿ ನೋವು ನಿವಾರಣ ಕೇಂದ್ರ

LOW BACK PAIN & SCIATICA



ನೀವು ಬೆನ್ನು ನೋವು ಹಾಗೂ ಕಾಲು (ಸಯಾಟಿಕಾ) ನೋವಿನಿಂದ ಬಳಲುತ್ತಿದ್ದರೆ ಅದನ್ನು ಸರ್ಜರಿ ಇಲ್ಲದೆ ಒಂದು ಚಿಕ್ಕ ಇನ್‌ಜೆಕ್ಷನ್ (ಟ್ರಾನ್ಸ್‌ಪೊರಾಮಿನಲ್ ಎಪಿಡೂರಲ್) ಗುಣಪಡಿಸಬಹುದು.

ಅಮೇರಿಕಾ ಹಾಗೂ ಬ್ರಿಟನ್ನಿನ ಅನುಭವಿ ವೈದ್ಯರಿಂದ ಸಲಹೆ ಹಾಗೂ ಚಿಕಿತ್ಸೆ

ನೀವು ದೀರ್ಘಕಾಲದಿಂದ ನೋವನ್ನನುಭವಿಸುತ್ತಿದ್ದು, ಸಾಮಾನ್ಯ ಔಷಧಗಳು, ಫಿಸಿಯೋತೆರಪಿ, ಶಸ್ತ್ರಚಿಕಿತ್ಸೆ ಪದ್ಧತಿಗಳಿಂದ ಪರಿಹಾರ ಸಿಕ್ಕಿಲ್ಲವೇ?

ಹಾಗಿದ್ದಲ್ಲಿ ಸಹಾಯ ನಮ್ಮಲ್ಲಿದೆ!

156,25 th cross, 19th main, 2nd block **Rajajinagar**, Bangalore-560010

36/52,27th cross, 12th main, 4th block **Jayanagar**, Bangalore-560011

Ph: 888 49 50 444/123 | info@relivpaincenter.com | www.relivpaincenter.com